ದಿನಾಂಕಃ 04.12.2025 ರಂದು ಸಾಕ್ಷಿಯನ್ನು ಕರೆಸಿ ಪ್ರಮಾಣ ಮಾಡಿಸಲಾಯಿತು.
ಮುಂದುವರೆದ ಪಾಟೀ ಸವಾಲು - ಶ್ರೀ. ಎಂ.ಆರ್.ಎಸ್ ವಕೀಲರಿಂದ ಆರೋಪಿ ಪರ

ನಾನು 2018 ನೇ ಇಸವಿಯಲ್ಲಿ ನಾನು ಸಾಗರದಲ್ಲಿ ಇದ್ದ ಮನೆ ಮಾರಾಟ ಮಾಡಿರುತ್ತೇನೆ ಅದರ ಸಂಬಂಧಪಟ್ಟ ದಾಖಲೆ ಹಾಜರುಪಡಿಸಬಲ್ಲೆ. ಸದರಿ ಮನೆ ನನ್ನ ಹೆಸರಿಗೆ ಇತ್ತು. ಎಷ್ಟು ಹಣಕ್ಕೆ ಆ ಸ್ವತ್ತನ್ನು ಮಾರಾಟ ಮಾಡಿರುತ್ತೇನೆ ಎಂದು ನನಗೆ ಈಗ ನೆನಪಿಲ್ಲ. ನನಗೆ ಕ್ರಯದ ಹಣವನ್ನು ಚೆಕ್ ಮೂಲಕ ಸ್ವಲ್ಪ ನೀಡಿರುತ್ತಾರೆ ಉಳಿದ ಹಣ ನಗದಾಗಿ ನೀಡಿರುತ್ತಾರೆ ಎನ್ನುತ್ತಾರೆ. ಗಣಪತಿ ಬ್ಯಾಂಕಿನಲ್ಲಿ ಇರುವ ಸಾಲವನ್ನು ಖರೀದಿ ಮಾಡಿದ ವ್ಯಕ್ತಿ ನೇರವಾಗಿ ಬ್ಯಾಂಕಿಗೆ ಜಮಾ ಮಾಡಿರುತ್ತಾರೆ. ನನಗೆ ನೀಡಿದ ಚೆಕ್ ನ್ನು ನಗದೀಕರಣಕ್ಕಾಗಿ ಬ್ಯಾಂಕಿಗೆ ಜಮಾ ಮಾಡಿರುತ್ತೇನೆ.

ನಾನು 2018 ನೇ ಇಸವಿಯಿಂದ ಬ್ಯಾಂಕಿಂದ ಹಣ ತೆಗೆಯುವುದು ಮತ್ತು ಹಾಕುವುದು ಮಾಡುತ್ತಿದ್ದೆ ಎಂದರೆ ಸರಿ. 2022 ರಲ್ಲಿ ಯೂನಿಯನ್ ಬ್ಯಾಂಕಿನಲ್ಲಿ ನನ್ನ ಖಾತೆ ಇತ್ತು. ಜನವರಿ 2022 ರಲ್ಲಿ ನಾನು ಬ್ಯಾಂಕಿನಲ್ಲಿ ಹಣ ತೆಗೆದಿರುತ್ತೇನೆ ಮತ್ತು ಜಮಾ ಸಹ ಮಾಡಿರುತ್ತೇನೆ ಎನ್ನುತ್ತಾರೆ. ಜನವರಿ 2022 ರಲ್ಲಿ ನಾನು ಬ್ಯಾಂಕಿನಲ್ಲಿ 8 ಲಕ್ಷ ರೂ ಹಣ ಡ್ರಾ ಮಾಡಿರಬಹುದು. ನನ್ನ ತಿಳುವಳಿಕೆ ನೋಟೀಸು ಮತ್ತು ದೂರಿನಲ್ಲಿ 8 ಲಕ್ಷ ಹಣ ಯಾವ ರೀತಿ ಬಂದಿರುತ್ತದೆ ಮತ್ತು ಬ್ಯಾಂಕಿಂದ ಹಣ ತೆಗೆದ ಬಗ್ಗೆ ತಿಳಿಸಿರುವುದಿಲ್ಲ ಎಂದರೆ ಸರಿ. ಆರೋಪಿ ಜನವರಿ 2022 ರಲ್ಲಿ ಹಣ ಬೇಕೆಂದು ಕೇಳಿರುತ್ತಾರೆ ಆದರೆ ದಿನಾಂಕ ನೆನಪಿಲ್ಲ. ನನ್ನ ಗಂಡನ ಬಳಿ ಆರೋಪಿ ಹಣ ಕೇಳಿದ 1-2 ತಿಂಗಳಲ್ಲಿ ಆರೋಪಿಗೆ ಹಣ ನೀಡಿರಬಹುದು ಎಂದು ಹೇಳವರು.

ಪಿರ್ಯಾಧಿ ಅಥವಾ ನೋಟೀಸುನಲ್ಲಿ ಆರೋಪಿ ಸಾಲ ಕೇಳಿದ ದಿನಾಂಕ ಮತ್ತು ನಾನು ಸಾಲ ನೀಡಿದ ದಿನಾಂಕ ತಿಳಿಸಲು ತೊಂದರೆ ಇರಲಿಲ್ಲ ಎಂದರೆ ಸರಿ. ಆರೋಪಿ ಹಣ ಕೇಳಿದ ದಿನ ನನ್ನ ಬಳಿ ಹಣ ನೀಡಲು ಇರಲಿಲ್ಲ ಎಂದರೆ ಸರಿ. ಹಣ ನೀಡಿದಾಗ ನನ್ನ ಗಂಡ ಹಾಜರು ಇದ್ದರು. ಹಣವನ್ನು ನನ್ನ ಗಂಡ ನೇರವಾಗಿ ನೀಡಿರುತ್ತಾರೆ ನಾನು ನೀಡಿರುವುಲ್ಲ. ಆರೋಪಿ ಬಡ್ಡಿ ಸೇರಿಸಿ ಕೊಡುತ್ತೇನೆಂದು ಹೇಳಿ ಹಣ ಪಡೆದಿರುತ್ತಾರೆ. ಹಣ ನೀಡಿದ ದಿನದಂದು ಆರೋಪಿಯಿಂದ ಪ್ರನೋಟು ಪಡೆದಿರುತ್ತೇವೆ. 2 ಚೆಕ್ ಗಳನ್ನು ಪಡೆದಿರುತ್ತೇವೆ ಎಂದು ಹೇಳುತ್ತಾರೆ. 2 ಚೆಕ್ ಗಳನ್ನು ಆರೋಪಿಗೆ ಭರ್ತಿ ಮಾಡಿ ನೀಡಿರುತ್ತಾರೆ. ನಮ್ಮ ಮುಂದೆ ಸದರಿ ಚೆಕ್ ನ್ನು ಭರ್ತಿ ಮಾಡಿದರೋ ಇಲ್ಲವೋ ನನಗೆ ನನಪಿಲ್ಲ.

ಪ್ರನೋಟುನಲ್ಲಿ ಆರೋಪಿ ಎಷ್ಟು ಹಣ ನಮೂದು ಮಾಡಿದ್ದರೋ ನನಗೆ ಗೊತ್ತಿಲ್ಲ. ಪ್ರನೋಟು ಬರೆದಾಗ ದೂಗೂರು ಪರಮೇಶ್ವರ್ ಹಾಜರು ಇದ್ದರು ಮತ್ತು ಆರೋಪಿ ನಮ್ಮ ಸಮಕ್ಷಮ ಅದನು ಭತಿ ಮಾಡಿಕೊಟ್ಟಿರುತ್ತಾರೆ ಚೆಕ್ ನ್ನು ದೂುಗರು ಪರಮೇಶ್ವರ ಕಚೇರಿಯಲ್ಲಿ ನೀಡಲಾಗಿರುತ್ತದೆ. ಸದರಿ 2 ಚೆಕ್‌ಗಳು ಮತ್ತು ಪ್ರನೋಟುಗಳು ನನ್ನ ಬಳಿ ಇರುತ್ತದೆ. ಸದರಿ ಇನ್ನೊಂದು ಚೆಕ್ ಮತ್ತು ಪ್ರನೋಟು ಹಾಜರುಪಡಿಸಲು ನನಗೆ ತೊಂದರೆ ಇಲ್ಲ ಎಂದರೆ ಸರಿ.

ಮುಂದುವರೆದ ಪಾಟೀ ಸವಾಲಿಗೆ ಆರೋಪಿ ಪರ ವಕೀಲರು ಸಮಾಯಾಕಾಶ ಕೋರಿದ್ದು ನೀಡಲಾಯಿತು.

(ತೆರೆದ ನ್ಯಾ.ದಲ್ಲಿ ನನ್ನ ಉಕ್ತಲೇಖನದ ಮೇರೆಗೆ ಗಣಕೀಕರಣಗೊಳಿಸಲಾಯಿತು)

ಪ್ರಧಾನ ಹಿರಿಯ ವ್ಯವಹಾರ ನ್ಯಾಯಾಧೀಶರು ಮತ್ತು
ಪ್ರ.ದ.ನ್ಯಾ. ದಂಡಾಧಿಕಾರಿಗಳು, ಸಾಗರ